## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 137 (152)
ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 11-08-2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆ ಹಳ್ಳಿಖೇಡ್ (ಬಿ), ಮನ್ನಾಖೇಳಿ ರಾಜೇಶ್ವರ ಸರ್ಕಾರಿ ಪ್ರೌಢ ಶಾಲೆಯನ್ನು ಉನ್ನತೀಕರಿಸಿ ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ, ಈ ಸರ್ಕಾರಿ ಶಾಲೆಯನ್ನು ಉನ್ನತೀಕರಿಸಲಾಗುವುದು: (ಮಾಹಿತಿ ನೀಡುವುದು) | ಹೌದು ಬಂದಿದೆ.<br><br>2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-110ರಲ್ಲಿನ ಘೋಷಣೆಯಂತೆ 50 ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಆರ್ಥಿಕ ಇಲಾಖೆಯು ದಿನಾಂಕ: 16-07-2025 ರಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿರುತ್ತದೆ.<br><br>1. 15 ಕಿ.ಮೀ. ವ್ಯಾಪ್ತಿಯೊಳಗೆ ಇತರ ಯಾವುದೇ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಿಲ್ಲದಿದ್ದಲ್ಲಿ ಹಾಗೂ 10ನೇ ತರಗತಿಯಲ್ಲಿ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆ 40ಕ್ಕಿಂತ ಕಡಿಮೆ ಇಲ್ಲದ ಪ್ರೌಢಶಾಲೆಗಳನ್ನು ಮಾತ್ರ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಯಾವುದಾದರೂ ಒಂದು ಕೋರ್ಸ್ ಸಂಯೋಜನೆಯೊಂದಿಗೆ (Course Combination) ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಿ ಪ್ರಾರಂಭಿಸುವುದು;<br><br>2. ಒಂದು ವೇಳೆ ಉನ್ನತೀಕರಿಸಲು ಪ್ರಸ್ತಾಪಿಸುವ ಪ್ರೌಢಶಾಲೆಯ 10ನೇ ತರಗತಿಯಲ್ಲಿ 100 ಅಥವಾ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ, 15 ಕಿ.ಮೀ. ವ್ಯಾಪ್ತಿಯಲ್ಲಿ ಇತರ ಯಾವುದೇ ಪದವಿ ಪೂರ್ವ ಕಾಲೇಜುಗಳು ಇರಬಾರದೆಂಬ ಮಾನದಂಡವನ್ನು ಕೈಬಿಡುವುದು;<br><br>3. ಕೆಕೆಡಿಆರ್‌ಬಿ/ಸಿಎಸ್‌ಆರ್ ಏಜೆನ್ಸಿಗಳಿಂದ ಮುಂದಿನ ಮೂರು ವರ್ಷಗಳ ಕಾಲ ವೇತನ ಮತ್ತು ಮೂಲಸೌಕರ್ಯಕ್ಕಾಗಿ ಅನುದಾನ ಒದಗಿಸಲಾಗುವ ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಗಳಿಗೆ ಮೇಲಿನ ಎರಡು ಷರತ್ತುಗಳಿಂದ ವಿನಾಯಿತಿ |

| | | |
|---|---|---|
| | | ನೀಡಬಹುದು;<br>4. ಯಾವುದೇ ನಿರ್ದಿಷ್ಟ ಕಾರಣಗಳಿಂದ ಮೇಲಿನ ಯಾವುದೇ ಷರತ್ತುಗಳಿಂದ ವಿನಾಯಿತಿ ನೀಡಬೇಕಾಗಿದ್ದಲ್ಲಿ ಅಂತಹ ಪ್ರಕರಣಗಳನ್ನು ಆಡಳಿತ ಇಲಾಖೆಯು ನಿರ್ದಿಷ್ಟ ಕಾರಣಗಳನ್ನು ವಿವರಿಸಿ ಪ್ರಸ್ತಾವನೆಯನ್ನು ಸಲ್ಲಿಸುವುದು;<br>5. ಹುದ್ದೆಗಳನ್ನು ನಿಯೋಜನೆ/ಮರುಹಂಚಿಕೆ (redeployment) ಮಾಡಲು ಕಾರ್ಯ ಸಾಧ್ಯವಾಗದ ಕಾರಣ ಹೊಸ ಹುದ್ದೆಗಳನ್ನು ಸೃಜಿಸಬೇಕಾದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು.<br>ಸದರಿ ಅಂಶಗಳಂತೆ ಮಾಹಿತಿಯನ್ನು ಒದಗಿಸುವಂತೆ ಸಂಖ್ಯೆ: ಇಪಿ 96 ಎಸ್ ಹೆಚ್ ಹೆಚ್ 2025 ರ ಏಕಕಡತದಲ್ಲಿ ನಿರ್ದೇಶಕರನ್ನು ಕೋರಲಾಗಿದ್ದು, ಸದರಿ ಮಾಹಿತಿ ಸ್ವೀಕೃತಗೊಂಡ ಕೂಡಲೇ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಈ ಬಗ್ಗೆ ನಿಯಮಾನುಸಾರ ಕ್ರಮವಹಿಸಲಾಗುವುದು. |
| ಆ) | ಬೀದರ್ ಜಿಲ್ಲೆಯಲ್ಲಿ ಕಳೆದ 2 ವರ್ಷದಲ್ಲಿ ಶಾಲೆಗಳ ಉನ್ನತೀಕರಿಸುವ ಸಂಬಂಧ ಸರ್ಕಾರಕ್ಕೆ ಎಷ್ಟು ಪ್ರಸ್ತಾವನೆಗಳು ಬಂದಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಕಳೆದ 2 ವರ್ಷದಲ್ಲಿ ಶಾಲೆಗಳ ಉನ್ನತೀಕರಿಸುವ ಸಂಬಂಧ ಸ್ವೀಕೃತವಾದ ಪ್ರಸ್ತಾವನೆಗಳು:<br>1.ಸರ್ಕಾರಿ ಪ್ರೌಢಶಾಲೆ, ಬಗದಲ್, ಬೀದರ್<br>2.ಸರ್ಕಾರಿ ಪ್ರೌಢಶಾಲೆ, ರಾಜೋಳ, ಬಸವಕಲ್ಯಾಣ.<br>3. ಸರ್ಕಾರಿ ಪ್ರೌಢಶಾಲೆ, ಕೋಹಿನೂರ, ಬಸವಕಲ್ಯಾಣ'<br>4. ಸರ್ಕಾರಿ ಪ್ರೌಢಶಾಲೆ, ಜನವಾಡಾ, ಬೀದರ್ ಜಿಲ್ಲೆ.<br>5. ಸರ್ಕಾರಿ ಪ್ರೌಢಶಾಲೆ, ನೌಬಾದ, ಬೀದರ್ ಜಿಲ್ಲೆ.<br>6. ಸರ್ಕಾರಿ ಪ್ರೌಢಶಾಲೆ, ಲಖಣಗಾಂವ, ಭಾಲ್ಕಿ ಬೀದರ್ ಜಿಲ್ಲೆ.<br>7. ಸರ್ಕಾರಿ ಪ್ರೌಢಶಾಲೆ, ಘಾಂಗಲೇರಾ, ಹುಮನಾಬಾದ್ ಬೀದರ್ ಜಿಲ್ಲೆ.<br>8. ಸರ್ಕಾರಿ ಪ್ರೌಢಶಾಲೆ, ರಾಜೇಶ್ವರ, ಬಸವಕಲ್ಯಾಣ, ಬೀದರ್ ಜಿಲ್ಲೆ.<br>9. ಸರ್ಕಾರಿ ಪ್ರೌಢಶಾಲೆ, ಮಾಳೆಗಾಂವ, ಬೀದರ್ ಜಿಲ್ಲೆ.<br>10. ಸರ್ಕಾರಿ ಪ್ರೌಢಶಾಲೆ, ಸಂತಪೂರ, ಔರಾದ ಬೀದರ್ ಜಿಲ್ಲೆ<br>11. ಸರ್ಕಾರಿ ಪ್ರೌಢಶಾಲೆ, ನಿಟ್ಟೂರು, ಬಾಲ್ಕಿ, ಬೀದರ್ ಜಿಲ್ಲೆ.<br>12. ಸರ್ಕಾರಿ ಪ್ರೌಢಶಾಲೆ, ಸಂಗೋಳಗಿ, ಬೀದರ್ ಜಿಲ್ಲೆ.<br>13. ಸರ್ಕಾರಿ ಪ್ರೌಢಶಾಲೆ, ಖೇಣಿ ರಂಜೋಳ, ಬೀದರ್ ಜಿಲ್ಲೆ.<br>14. ಸರ್ಕಾರಿ ಪ್ರೌಢಶಾಲೆ, ಹೊಕರ್ಣ, ಔರಾದ, ಬೀದರ್ ಜಿಲ್ಲೆ. |

| | | |
|---|---|---|
| | | 15. ಸರ್ಕಾರಿ ಪ್ರೌಢಶಾಲೆ, ಮುರ್ಕಿ, ಔರಾದ, ಬೀದರ್ ಜಿಲ್ಲೆ.<br>16. ಸರ್ಕಾರಿ ಪ್ರೌಢಶಾಲೆ, ಗುನ್ನಳ್ಳಿ, ಬೀದರ ಜಿಲ್ಲೆ.<br>17. ಸರ್ಕಾರಿ ಪ್ರೌಢಶಾಲೆ, ಹೊಕ್ರಾಣಾ, ಔರಾದ, ಬೀದರ ಜಿಲ್ಲೆ.<br>ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳನ್ನು ಉನ್ನತೀಕರಿಸಿ, ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ನಿರ್ದೇಶಕರ ದಿನಾಂಕ: 06-03-2025 ರ ಪ್ರಸ್ತಾವನೆಯ ಕುರಿತಂತೆ ಸರ್ಕಾರದ ಪತ್ರ ಸಂಖ್ಯೆ: ಇಪಿ 67 ಎಸ್‌ಹೆಚ್‌ಹೆಚ್ 2025, ದಿನಾಂಕ: 21.05.2025 ರಲ್ಲಿ ಪ್ರಸ್ತಾಪಿತ 554 ಸರ್ಕಾರಿ ಪ್ರೌಢ ಶಾಲೆಗಳ ಪೈಕಿ ಉನ್ನತೀಕರಣದ ಮಾನದಂಡವನ್ನು ಪೂರೈಸಿರುವ ಅರ್ಹ ಸರ್ಕಾರಿ ಪ್ರೌಢ ಶಾಲೆಗಳನ್ನು ಮಾತ್ರ ಉನ್ನತೀಕರಿಸಲು ಈ ಸಂಬಂಧವಾಗಿ ಹುದ್ದೆಗಳ ಸೃಜನೆ ಹಾಗೂ ಮೂಲಭೂತ ಸೌಲಭ್ಯಕ್ಕಾಗಿ ತಗಲುವ ಆವರ್ತಕ/ಅನಾವರ್ತಕ ವೆಚ್ಚದ ಮಾಹಿತಿಯೊಂದಿಗೆ ಕ್ರೋಢೀಕೃತ ಸಮಗ್ರ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಹಾಗೂ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳನ್ನು 2024-25 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-98 ರಲ್ಲಿ ಘೋಷಿಸಿರುವಂತೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅನುದಾನದಿಂದ ಮೇಲ್ದರ್ಜೆಗೇರಿಸಿ ಪ್ರಾರಂಭಿಸುವ ಬಗ್ಗೆಯೂ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಸಲ್ಲಿಸುವಂತೆ ನಿರ್ದೇಶಕರನ್ನು ಕೋರಲಾಗಿರುತ್ತದೆ. ಈ ಸಂಬಂಧ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಂದ ಮಾಹಿತಿಯನ್ನು ಕ್ರೂಢೀಕರಿಸಲಾಗುತ್ತಿದ್ದು, ಈ ಬಗ್ಗೆ ಪೂರ್ಣ ಮಾಹಿತಿ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ, ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಇಪಿ 268 ಡಿಜಿಡಬ್ಲೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು